# ಜೋಂಬಿ ಜಗತ್ತು

ಜೋಂಬಿಗಳ ಸಿನಿಮಾಗಳು ಬಹುತೇಕ ಮಕ್ಕಳಿಗೆ ಅಚ್ಚುಮೆಚ್ಚು. ಯುವಜನರಿಗೂ ಇಷ್ಟ. ಜೋಂಬಿಗಳು ಭಯ ಹುಟ್ಟಿಸುವಂತಿರುತ್ತವೆ, ಅನಾಹುತ ಸೃಷ್ಟಿಸುತ್ತವೆ. ನಿಧಾನಗತಿ ಚಲನೆಯ ಹಾಗೂ ನಿರ್ಭಾವುಕ ಕಣ್ಣುಗಳ ಜೋಂಬಿಗಳು ಕೆಲವೊಮ್ಮೆ ಗಾಯಗೊಂಡಿರುತ್ತವೆ; ಕೊಳೆಯುತ್ತಿರುವ ದೇಹವನ್ನು ಹೊಂದಿರುತ್ತವೆ. ಬುದ್ಧಿಶಕ್ತಿ ನಷ್ಟವಾದ ಅವು ಮನುಷ್ಯರನ್ನು ಕಿತ್ತುತಿನ್ನುತ್ತವೆ.

ಜೋಂಬಿಗಳಂಥ ಜೀವಗಳು ನಮ್ಮ ಪುರಾಣ ಮತ್ತು ಜನಪದ ಕಥನಗಳಲ್ಲಿ ಬೇರೆ ಬೇರೆ ರೂಪದಲ್ಲಿ ಕಾಣಿಸಿಕೊಂಡಿವೆ. ಮಾಟದ ಬಾಧೆಗೆ, ವಶೀಕರಣಕ್ಕೆ ಒಳಗಾದವರು ಜೋಂಬಿಗಳಂತೆಯೇ ವರ್ತಿಸುತ್ತಾರೆ. ಹೃದಯ–ಮಿದುಳನ್ನು ಕಿತ್ತು ತಿನ್ನುವ, ರಕ್ತ ಕುಡಿಯುವ, ನೆತ್ತರಲ್ಲಿ ಮೀಯುವ ಮಾಂತ್ರಿಕರು ಇಲ್ಲವೇ ಅತಿಮಾನುಷರು ಪುರಾಣ ಇತಿಹಾಸಗಳಲ್ಲಿದ್ದಾರೆ. ಅನಾಥಸ್ಥಿತಿಯ ಅಲೆದಾಟದ ಆತ್ಮಗಳು ಹಾಗೂ ದೆವ್ವಗಳನ್ನು ಜೋಂಬಿಗಳ ಪೂರ್ವಸೂರಿಗಳ ರೂಪದಲ್ಲಿ ಗುರ್ತಿಸಬಹುದು. ಆತ್ಮ–ದೆವ್ವದ ಕಥನಗಳೇ ಡಿಜಿಟಲ್ ಕಾಲಘಟ್ಟದಲ್ಲಿ ಪರಿಷ್ಕರಣೆಗೊಂಡು ಜೋಂಬಿಗಳಾಗಿವೆ.

ಹಾಲಿವುಡ್‌ನಲ್ಲಿ ಮೊದಲಿಗೆ ಜನಪ್ರಿಯಗೊಂಡ ಜೋಂಬಿ ಕಥನಗಳು ನಿಧಾನವಾಗಿ ಭಾರತೀಯ ಸಿನಿಮಾಗಳಲ್ಲೂ ಕಾಣಿಸಿಕೊಳ್ಳುತ್ತಿವೆ. ಕಾಲ್ಪನಿಕ ಸೃಷ್ಟಿಗಳಾದ ಇವುಗಳ ಜನಪ್ರಿಯತೆಗೆ ಕಾರಣವೇನು? ನಿರ್ದಿಷ್ಟ ಕಾರಣಗಳನ್ನು ಹೇಳುವುದು ಕಷ್ಟ. ಕುತೂಹಲ ಹಾಗೂ ರೋಚಕತೆಯ ಹುಡುಕಾಟದ ಮನುಷ್ಯಸಹಜ ಸ್ವಭಾವ ಜೋಂಬಿಗಳ ಕುರಿತ ಒಲವಿಗೊಂದು ಕಾರಣವಿರಬಹುದು. ಜೋಂಬಿಗಳ ಜನಪ್ರಿಯತೆಗೆ ಮತ್ತೊಂದು ಕಾರಣವೂ ಇರುವಂತಿದೆ. ಅದು, ಮೊಬೈಲ್ ಕಾಲಘಟ್ಟದ ನಾವುಗಳೆಲ್ಲ ಯಾವುದೋ ಒಂದು ರೀತಿ ಜೋಂಬಿಗಳನ್ನೇ ಹೋಲುತ್ತಿರುವುದು. ಬಹುಶಃ, ಆಧುನಿಕ ಮನುಷ್ಯನ ವ್ಯಕ್ತಿತ್ವದ ಒಡಕಲು ಬಿಂಬದ ರೂಪದಲ್ಲಿ ಜೋಂಬಿಗಳನ್ನು ಗುರ್ತಿಸಬಹುದೇನೊ?

ವರ್ತಮಾನದ ನಮ್ಮ ಬದುಕಿನಲ್ಲಿ ಒಡಕಲು ಬಿಂಬಗಳು ಕಿಕ್ಕಿರಿದಿವೆ. ನಮ್ಮ ಪೂರ್ವಸೂರಿಗಳು ಕಲ್ಲು ಮಣ್ಣು ಇಟ್ಟಿಗೆಗಳ ಗೋಡೆ ಕಟ್ಟುವುದನ್ನು ನಾಗರಿಕತೆ ಎಂದರು. ಗಾರೆ ಬಳಸಿ ಗೋಡೆಗಳನ್ನು ಭದ್ರಪಡಿಸಿದರು. ಗೋಡೆಗಳನ್ನು ಕಟ್ಟುವುದರಲ್ಲಿ ನಮ್ಮದು ಅಸಾಧಾರಣ ಸಾಧನೆ. ಗೋಡೆಗಳ ಮೂಲಕ ಕೋಣೆಗಳನ್ನು ಸೃಷ್ಟಿಸುತ್ತ, ದೊಡ್ಡ ಮನೆಗಳನ್ನು ಗೋಡೆಗಳ ಮೂಲಕ ಸಣ್ಣದಾಗಿಸುತ್ತ ಸಾಗಿದೆವು. ನಮ್ಮ ಹುಚ್ಚಿಗೆ ಕಲ್ಲು ಮಣ್ಣು ಸಿಮೆಂಟು ಸಾಲದು ಎನ್ನಿಸಿದಾಗ ಡಿಜಿಟಲ್ ಜಗತ್ತಿನಲ್ಲಿ ಗೋಡೆಗಳನ್ನು ಕಟ್ಟತೊಡಗಿದೆವು. ವಿರೋಧಾಭಾಸ ನೋಡಿ: ಒಡಹುಟ್ಟುಗಳನ್ನು ದೂರೀಕರಿಸಿ ಕುಟುಂಬಗಳನ್ನು ಸಣ್ಣದಾಗಿಸಿಕೊಂಡೆವು. ಅದೇಕಾಲಕ್ಕೆ ಡಿಜಿಟಲ್ ಜಗತ್ತಿನ ಮೂಲಕ ವಿಶ್ವದೆಲ್ಲೆಡೆ ಸ್ನೇಹದ ಹಸ್ತ ಚಾಚಿದೆವು. (‘ವಸುಧೈವ ಕುಟುಂಬಕಂ’ ಮಾತು ಇವತ್ತಿನ ಡಿಜಿಟಲ್ ಜಗತ್ತಿಗೆ ಹೆಚ್ಚು ಹೊಂದುವಂತಹದ್ದು.) ಮನೆಮಂದಿಯೊಂದಿಗೆ ಮಾತು ಕಡಿಮೆ ಮಾಡಿದೆವು; ನಮ್ಮೆಲ್ಲ ಮಾತುಗಳು ಮೊಬೈಲ್‌ಗೆ ಮೀಸಲು. ಈ ಎಲ್ಲ ಬದಲಾವಣೆಗಳು ನಮ್ಮೊಳಗಿನ ತೇವ ಆವಿಯಾಗುತ್ತಿರುವುದನ್ನು ಸೂಚಿಸುತ್ತಿಲ್ಲವೆ?

ಮನುಷ್ಯ ಯಂತ್ರಗಳಿಗೆ ದಾಸನಾಗುವ ಆತಂಕ ಬಹುಶಃ ವಿಜ್ಞಾನ–ತಂತ್ರಜ್ಞಾನದ ಒಡನಾಟದೊಂದಿಗೇ ಆರಂಭಗೊಂಡಿರಬೇಕು. ಆ ಆತಂಕ, ಮೊಬೈಲ್‌ಗೆ ನಮ್ಮನ್ನು ಒಪ್ಪಿಸಿಕೊಳ್ಳುವ ಮೂಲಕ ಬಹುತೇಕ ನಿಜವಾಗಿಬಿಟ್ಟಿದೆ. ಇಷ್ಟಪಾತ್ರರನ್ನು ನಾವು ಬಿಟ್ಟಿರಬಲ್ಲೆವು; ಮೊಬೈಲ್‌ಫೋನನ್ನು ಬಿಟ್ಟಿರಲಾರೆವು. ಕರ್ಣನ ಕವಚ–ಕುಂಡಲಗಳಂತೆ ನಮಗೆ ಅಂಟಿಕೊಂಡಿರುವ ಮೊಬೈಲು! ನಾವು ಮೊಬೈಲ್ ಬಳಸುತ್ತಿದ್ದೇವೆ ಎನ್ನುವುದಕ್ಕಿಂತಲೂ, ಮೊಬೈಲ್ ನಮ್ಮನ್ನು ನಿರ್ದೇಶಿಸುತ್ತಿದೆ ಎನ್ನುವುದೇ ಹೆಚ್ಚು ಸರಿ. ಈ ಬದಲಾವಣೆ ಬುದ್ಧಿನಷ್ಟವನ್ನೂ ಭಾವದ ನಷ್ಟವನ್ನೂ ಸೂಚಿಸುತ್ತಿದೆ ಎನ್ನುವುದಾದರೆ, ನಾವು ಜೋಂಬಿಗಳಾಗುವ ಹಾದಿಯಲ್ಲಿದ್ದೇವೆ ಎಂದರ್ಥವಲ್ಲವೇ? ಸಂಪತ್ತಿನ ದುರಾಸೆ, ಸಹಮನುಷ್ಯನನ್ನು ಕಿತ್ತು ತಿಂದಾದರೂ ನಮ್ಮ ಹಿತಾಸಕ್ತಿ ಸಾಧಿಸಿಕೊಳ್ಳುವ ಸ್ವಾರ್ಥ, ಧರ್ಮದ ಹೆಸರಿನಲ್ಲಿ ಕಟ್ಟಿಕೊಳ್ಳುತ್ತಿರುವ ಗೋಡೆಗಳು – ಇವೆಲ್ಲ ಮನುಷ್ಯ ಜಗತ್ತು ಮತ್ತು ಜೋಂಬಿ ಜಗತ್ತಿನ ನಡುವಿನ ಗೆರೆಯನ್ನು ಅಳಿಸುತ್ತಿವೆ.

ಜೋಂಬಿಗಳ ಸೃಷ್ಟಿಗೆ ತಂತ್ರಜ್ಞಾನವೂ ಪೂರಕವಾಗಿದೆ. ಮನುಷ್ಯನ ಬುದ್ಧಿಮತ್ತೆಗೆ ಸವಾಲೆಸೆಯುವಂತೆ ಬೆಳೆಯುತ್ತಿರುವ ‘ಎಐ’ ತಂತ್ರಜ್ಞಾನ ಕೂಡ ಅಪಾರಶಕ್ತಿಯ ಜೋಂಬಿಯಂತೆ ಕಾಣಿಸುತ್ತಿದೆ.

ಮಕ್ಕಳನ್ನು ಕೂಡ ಜೋಂಬಿ ಸಂತಾನವಾಗಿ ರೂಪಿಸುತ್ತಿರುವುದು ಇತಿಹಾಸದಲ್ಲಿ ಮನುಷ್ಯ ಕಂಡಿರುವ ಬಹು ದೊಡ್ಡ ಹಿನ್ನಡೆ. ಎಳೆಯ ಮನಸ್ಸುಗಳಲ್ಲಿ ಆರ್ದ್ರತೆಯನ್ನು ತುಂಬುವಲ್ಲಿ ಶಿಕ್ಷಣ ಹಾಗೂ ಕುಟುಂಬ ಇಂಧನಕೇಂದ್ರಗಳು. ದುರದೃಷ್ಟವಶಾತ್, ಶಾಲೆಗಳು ಜೋಂಬಿಗಳನ್ನು ತಯಾರಿಸುವ ಕಾರ್ಖಾನೆಗಳಾಗಿ ಬದಲಾಗಿವೆ. ಸ್ಪರ್ಧೆ ಹಾಗೂ ಪರೀಕ್ಷೆಯ ಹೆಸರಿನಲ್ಲಿ ಮಕ್ಕಳ ಮನಸ್ಸನ್ನು ಶಿಕ್ಷಣ ವ್ಯವಸ್ಥೆ ಹಿಂಡುತ್ತಿದೆ. ಛಿದ್ರಗೊಂಡ ಕೌಟುಂಬಿಕ ವ್ಯವಸ್ಥೆಯೂ ಮಕ್ಕಳನ್ನು ಜೋಂಬಿಗಳಂತೆಯೇ ಬೆಳೆಸುತ್ತಿದೆ. ಶಾಲಾಕಾಲೇಜುಗಳ ಮಕ್ಕಳನ್ನು ಗಮನವಿಟ್ಟು ನೋಡಿ. ದೊಡ್ಡವರ ಜಗತ್ತಿನ ಸಾಬೂನು ನೀರಿನಲ್ಲಿ ಬಣ್ಣಬಣ್ಣದ ಕನಸುಗಳು ತೊಳೆದುಹೋದಂತೆ ಕಿರಿಯರ ಕಣ್ಣುಗಳು ಹೊಳಪು ಕಳೆದುಕೊಂಡು ನಿಸ್ತೇಜ ತಾರೆಗಳಂತೆ ಕಾಣಿಸುತ್ತಿವೆ. ಖಾಸಗಿ ಶಾಲೆಗಳ ಎದುರು ಹಾದುಹೋದರೆ ಪರೀಕ್ಷೆಗಳಲ್ಲಿ ಹೆಚ್ಚು ಹೆಚ್ಚು ಅಂಕಗಳನ್ನು ಗುಡ್ಡೆ ಹಾಕಿಕೊಂಡ ಜಾಣಜಾಣೆಯರ ಫೋಟೊಗಳ ಪ್ರದರ್ಶನ ಫಲಕಗಳು ಗಮನಸೆಳೆಯುತ್ತವೆ. ಶಾಲಾಕಾಲೇಜುಗಳ ಜಾಹೀರಾತುಗಳಂತೆ ಕಾಣಿಸುವ ಆ ಹೋರ್ಡಿಂಗ್‌ಗಳಲ್ಲಿನ ಚಿತ್ರಪಟಗಳಲ್ಲಿರುವುದು ಮಕ್ಕಳೋ ಇಲ್ಲವೇ ಜೋಂಬಿಗಳೋ ಎಂದು ಯೋಚಿಸುವುದು ಕ್ರೌರ್ಯವಾದರೂ, ಮನೋವಿಕಾಸಕ್ಕೆ ಒತ್ತುನೀಡದೆ ಅಂಕಗಳಿಕೆಯಷ್ಟನ್ನೇ ಗುರಿಯನ್ನಾಗಿಸಿಕೊಂಡ ವಿದ್ಯಾಸಂಸ್ಥೆಗಳು ಜೋಂಬಿಗಳ ಕಾರ್ಖಾನೆಗಳೇ ಹೌದು.

‘ಸಾಹಿತ್ಯದ ಸಂಪರ್ಕದಿಂದಾಗಿ ನಿಮ್ಮ ಹೃದಯ ಎಂದೂ ಕಠಿಣವಾಗುವುದಿಲ್ಲ. ನಿಮ್ಮ ಉತ್ಸಾಹ ಎಂದೂ ದಣಿಯುವುದಿಲ್ಲ. ನಿಮ್ಮ ಸ್ಪರ್ಶ ಎಂದೂ ನೋವುಂಟು ಮಾಡುವುದಿಲ್ಲ’ ಎನ್ನುವುದು ಬ್ರಿಟನ್ ಲೇಖಕ ಚಾರ್ಲ್ಸ್ ಡಿಕನ್ಸ್ ಮಾತು. ಸಾಹಿತ್ಯವನ್ನೊಳಗೊಂಡಂತೆ ಎಲ್ಲ ಕಲೆಗಳೂ ನಮ್ಮ ಹೃದಯವನ್ನು ಮಾನವೀಯಗೊಳಿಸುವ ಕೆಲಸವನ್ನೇ ಮಾಡುತ್ತವೆ. ಆದರೆ, ಸಾಹಿತ್ಯ–ಕಲೆಯ ಸಂಪರ್ಕದ ಸಾಧ್ಯತೆಗಳು ವರ್ತಮಾನದ ಶಿಕ್ಷಣವ್ಯವಸ್ಥೆಗೆ ಅಪಥ್ಯ. ಹಾಗೆಂದು, ಸಾಹಿತ್ಯ–ಕಲೆಯ ನಿಷೇಧದ ಮಾತುಗಳನ್ನೇನೂ ನಮ್ಮ ಶಿಕ್ಷಣ ವ್ಯವಸ್ಥೆ ಆಡುವುದಿಲ್ಲ. ಅದು, ತನ್ನ ತೆಕ್ಕೆಗೆ ಬರುವ ಚಿಣ್ಣರನ್ನು ಹೃದಯಶೂನ್ಯರನ್ನಾಗಿ ಪರಿವರ್ತಿಸುತ್ತದೆ. ಹೃದಯವೇ ಇಲ್ಲದ ಮೇಲೆ, ಸಾಹಿತ್ಯ–ಸಂಸ್ಕೃತಿಯ ಬಗೆಗಿನ ಮಾತುಗಳಿಗೆ ಆಸ್ಪದವಾದರೂ ಎಲ್ಲಿ?

■ **ಚಂಪಕಮಾಲಾ**

## ಮಾತೇ ಮುತ್ತು

- ಜಗತ್ತಿನಲ್ಲಿ ಹೇಳುವವರಿಗಿಂತ ಹೇಳಿದಂತೆ ನಡೆಯುವವರ ಯೋಗ್ಯತೆ ಹೆಚ್ಚಿನದು.

  –ಗಳಗನಾಥ

- ಸತ್ಯ ಕೂಡ ಆಯಾ ಕಾಲಮಾನದ ತುಲನೆಯಿಂದ ಬದಲಾಗುವ ಜೀವನ ನಿರ್ಣಯ.

  –ಶಿವರಾಮ ಕಾರಂತ

- ಬದುಕಿನ ಗದ್ದಲ ಹೆಚ್ಚಾಗಿದ್ದಾಗ ಬಹಳ ಜನರಿಗೆ ಸಾವಿನ ಸವಾಲು ಕೇಳಿಸುವುದಿಲ್ಲ.

  –ಗೋಪಾಲಕೃಷ್ಣ ಅಡಿಗ

- ಮುಂದಿರುವ ಹುಣ್ಣಿಮೆಯ ಸೊಬಗನ್ನು ಸವಿಯದೆ, ಮುಂಬರಲಿರುವ ಅಮಾವಾಸ್ಯೆಯನ್ನು ನೆನೆದು ಕೊರಗುತ್ತಾ ಕೂರುವುದು ವಿವೇಕವೆನ್ನಿಸದು.

  –ಕೆ.ಎಸ್. ನಿಸಾರ್ ಅಹಮದ್

- ಜೀವನವು ಸಜೀವವಾಗಿರಬೇಕಾದರೆ ಅದು ಪುರಾತನವಾದ ಸತ್ವಸಾರವನ್ನು ಕ್ಷಣಕ್ಷಣಕ್ಕೂ ಸಂಗ್ರಹಿಸುತ್ತಾ ನೂತನಕ್ಕೆ ಹರಿಯುತ್ತಿರಬೇಕು.

  –ಕುವೆಂಪು